N. R. W. S. Scheme In Bidar District

590. Sri BAPURAO ANANDA RAO (Basavakalyan).—

Will the Minster for Community Development and Social Welfare be pleased to state:—

(*a*) the N.R.W.S. Schemes pending completion in Bidar District even after the expiry of scheduled time ;

(*b*) the reasons for the delay ?

Sri M. MALLIKARJUNASWAMY(Minister for Community Development and Social Welfare).—

(*a*) 33 schemes are pending completion.

(*b*) There was no response to the tenders from the contractors. Even the works entrusted on "piece work system" were not completed by the Contractors who abandoned those works and new agencies had to be fixed for such works.

Sri BAPU RAO ANANDA RAO.—Has it come to the notice of the Government that because of the inefficiency and indifferece of the concerned officers these schemes are pending ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಆಫೀಸರ್ಸ್ ಇನ್‌ಎಫಿಷಿಯೆನ್ಸಿ ಎಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಈ ಬಗ್ಗೆ ಟೆಂಡರ್ಸ್ ಕಾಲ್‌ಫಾರ್ ಮಾಡಿದಾಗ ಮುಂದೆ ಯಾರು ಬರಲಿಲ್ಲ. ಹಾಗೆ ಮುಂದೆ ಬಂದಂಥ ಕಂಟ್ರಾಕ್ಟರ್ ಕೂಡ ಆ ಕೆಲಸವನ್ನು ಅರ್ಧಮರ್ಧ ಮಾಡಿಬಿಟ್ಟರು. ಆನಂತರ ಆ ಕೆಲಸವನ್ನು ಪೀಸ್ ವರ್ಕ್ ಸಿಸ್ಟಂ ಮೇರೆ ಮಾಡುವಂತೆ ಕೊಟ್ಟರು, ಅದೂ ಕೂಡ ಪೂರ್ತಿ ಸರಿಯಾಗಿ ಆಗಲಿಲ್ಲ. ಆದುದರಿಂದ ಇದನ್ನು ಹೊಸ ಏಜೆನ್ಸಿಗೆ ಕೊಡಬೇಕಾಯಿತು. ಆನಂತರ ಪಂಪ್ ಸಪ್ಲೈಯರ್ಸ್ ಕೂಡ ಅವರು ಸಪ್ಲೈ ಮಾಡುವುದನ್ನು ನಿಧಾನ ಮಾಡಿದರು. ಆದುದರಿಂದ ಅವನ್ನೂ ಕೂಡ ಬೇರೆಯವರಿಗೆ ಕೊಡಬೇಕಾಯಿತು. ಈ ಕಾರಣದಿಂದ ಇದು ಪೆಂಡಿಂಗ್ ಆಗಿ ಉಳಿದಿವೆ.

Sri BAPU RAO ANANDA RAO.—Since how long these works are pending ? They are pending not only for 1 or 2 years, but for years together. How long will you take to complete all these works ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಕ್ಸಿಲರೇಟೆಡ್ ಪ್ರೊಗ್ರಾಂ ಪ್ರಕಾರ ಸ್ಯಾಂಕ್ಷನ್ ಆಗಿರುವ 4 ಸ್ಕೀಮುಗಳೂ ಕೂಡ ಬಹುತಃ 31-3-1974ರ ಒಳಗಾಗಿ ಆ ಕೆಲಸವನ್ನು ಪೂರೈಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಇನ್ನು ಉಳಿದ ಕೆಲಸವನ್ನೂ ಕೂಡ ಸ್ಕೇರ್ಸಿಟಿ ಏರಿಯಾದಲ್ಲಿ ಕೆಲವು ವರ್ಕ್ಸ್ ಇರುವುದರಿಂದ ಅಲ್ಲಿ ಕುಡಿಯುವ ನೀರಿನ ಅಭಾವ ಇರುವುದರಿಂದ ಅಲ್ಲಿ ಅಧಿಕಾರಿಗಳಿಗೆ ಆದಷ್ಟು ಜಾಗ್ರತೆ ಈ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಆದೇಶವನ್ನು ಈಗಾಗಲೇ ಕೊಟ್ಟಿದ್ದೇವೆ. ಯಾವುದಾದರೂ ಜಾಗದಲ್ಲಿ ತಡವಾಗಿದ್ದರೆ ಅಥವಾ ಇನ್ನು ಎಲ್ಲಿಯಾದರೂ ನಡೆಸಬೇಕಾಗಿದ್ದರೆ ಹೇಳಿದರೆ ಆ ಕೆಲಸಗಳನ್ನು ಜರೂರು ಆಗಿ ಮಾಡುವುದಕ್ಕೆ ಆಜ್ಞೆ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, (ಅ)ಗೆ ಉತ್ತರವಾಗಿ 33 ಯೋಜನೆಗಳು ಪೂರ್ತಿಯಾಗದೇ ಉಳಿದಿವೆ ಎಂದು ಹೇಳಿದ್ದೀರಿ. ಬೀದರ್ ಜಿಲ್ಲೆಯಲ್ಲಿ ಈ ಕೆಲಸವನ್ನು ತುರ್ತಾಗಿ ಮಾಡಬೇಕಾಗಿತ್ತು. ಇದು ಎಷ್ಟು ದಿವಸದಿಂದ ಪೆಂಡಿಂಗ್‌ನಲ್ಲಿ ಇದೆ ? ಇದರ ಬಗ್ಗೆ ಕಂಪ್ಲೈಂಟ್ ಏನಾದರೂ ಬಂದಿದೆಯೇ ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಸ್ವಾಮಿ, 1965-66ರಲ್ಲಿ ಒಂದು ವರ್ಕ್ ಸ್ಯಾಂಕ್ಷನ್ ಆಯಿತು. ಮತ್ತೆ 1966-1967ರಲ್ಲಿ ಒಂದು, 1967-1968ರಲ್ಲಿ 14, 1968-1969ರಲ್ಲಿ 1, 1969- 970ರಲ್ಲಿ 11, 1970-1971ರಲ್ಲಿ 14, 1971-1972ರಲ್ಲಿ4, 1972-1973ರಲ್ಲಿ 4, ಈ ರೀತಿ ಒಟ್ಟು 50 ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಈಗಾಗಲೇ 13 ಕೆಲಸಗಳು ಪೂರ್ತಿ ಆಗಿವೆ. ಆಗಲೇ ನೀರನ್ನು ಕೊಟ್ಟಿದ್ದೇವೆ ಇನ್ನು ಉಳಿದುದನ್ನು ಬೇಗನೆ ಮುಗಿಸಬೇಕೆಂದು ಈಗಾಗಲೇ ಹೇಳಿದ್ದೇವೆ.

Sri BAPU ANANDA RAO.—Since how long these works are pending? They are pending not only for 1 or 2 years, but for years together. How long will you take to complete all these works?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಆ ಬಗ್ಗೆ ಹೇಳಿದ್ದೇನೆ.

ಅದು ಸುಮಾರು 4 ಪುಟವಷ್ಟು ಇದೆ. ಅದನ್ನು ಓದಬೇಕಾದರೆ ಅರ್ಧಗಂಟೆಯಾಗುತ್ತದೆ. ಬಾಕಿ ಕೆಲಸಗಳನ್ನು ಜಾಗ್ರತೆ ಮಾಡುತ್ತೇವೆ.

Industry in Maddur Taluk

728. Sri A. D. BILI GOWDA (Maddur):—

Will the Minister for Industries be pleased to state.—

whether any Industry in Maddur Taluk is to be started and if so, the nature of the industry, the seetor in which the industry is going to be started and the exact location of the same?

Sri S. M. KRISHNA (Minister for Industries).—

M/s. Chamundeswari Sugars Ltd., Bangalore, are setting up a Sugar Factory at K. M. Doddi, Maddur Taluk, in the Private Sector. The possibility of setting up an Acetate Tow Factory in Maddur Taluk is being considered.

ಶ್ರೀ ಎ. ಡಿ. ಬಿಳಿಗೌಡ.—ಸ್ವಾಮಿ, ಮದ್ದೂರು ತಾಲ್ಲೂಕಿನ ಕೆ. ಎಂ. ದೊಡ್ಡಿಯಲ್ಲಿ ಬೆಂಗಳೂರಿನ ಚಾಮುಂಡೇಶ್ವರಿ ಷುಗರ್ಸ್ (ಲಿ) ಅವರು ಸಕ್ಕರೆ ಕಾರ್ಖಾನೆಯೊಂದನ್ನು ಖಾಸಗೀ ಕ್ಷೇತ್ರದಲ್ಲಿ ಸ್ಥಾಪಿಸಲಿದ್ದಾರೆ ಎಂದು ಹೇಳಿದ್ದೀರಿ. ಆದರೆ ಮದ್ದೂರ್ ತಾಲ್ಲೂಕಿನ ಬಹುಭಾಗ ಬೆಂಗಾಡು ಪ್ರದೇಶವಾಗಿರುವುದರಿಂದ ಆಗಾಗ್ಗೆ ಜನಗಳು ಕ್ಷಾಮಕ್ಕೆ ತುತ್ತಾಗುತ್ತಾರೆ. ಅಲ್ಲಿ ಶಿಂಶಾ ನದಿ ಹರಿಯುತ್ತದೆ, ಅಲ್ಲಿ ರೈಲ್ವೆ ಸಂಪರ್ಕ ಇದೆ, ರಸ್ತೆ ಸಂಪರ್ಕ ಇದೆ, ಅಲ್ಲಿ ಸ್ವಲ್ಪ ಬಂಜರೂ ಭೂಮಿಯೂ ಕೂಡ ಇರುವುದರಿಂದ ಅಲ್ಲಿ ಇನ್ನು ಏನಾದರೂ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಿ, ಆ ಏರಿಯಾದಲ್ಲಿರತಕ್ಕಂಥ ಕ್ಷಾಮ ಮತ್ತು ಬಡ ಜನತೆಯ ತೊಂದರೆಯನ್ನು ಇಂಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.—ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬೈರೇಗೌಡ.—ಸ್ವಾಮಿ, ಮದ್ದೂರು ತಾಲ್ಲೂಕಿನಲ್ಲಿ ಅಸಿಟೇಟ್ ಟೌ ಕಾರ್ಖಾನೆಯೊಂದನ್ನು ಸ್ಥಾಪಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಅದು ಯಾವ ಪರಿಶೀಲನೆಯಲ್ಲಿದೆ ಎನ್ನುವುದನ್ನು ಹೇಳುತ್ತೀರಾ?